ಮೇಲಿನ ಪಟ್ಟಿಯಲ್ಲಿನ ಅಧಿಕಾರಿ / ಸಿಬ್ಬಂದಿಯ ವಿವರಗಳು ಕೇವಲ ರಾಜ್ಯ ಗುಪ್ತವಾರ್ತೆ ವಿಭಾಗಕ್ಕೆ ಮಾತ್ರ ಸಂಬಂಧಪಟ್ಟಿರುತ್ತದೆ. ಅಲ್ಲದೆ ಬೇಹುಗಾರಿಕೆಯ ಸಿಬ್ಬಂದಿಯು ರಾಜ್ಯದ ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರ ಹಾಗೂ ಬೆಂಗಳೂರು / ಮೈಸೂರು / ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರ ಅಧೀನದಲ್ಲಿನ ವಿಶೇಷ ಶಾಖೆಗಳಲ್ಲಿ ಹಾಗೂ ಪೊಲೀಸ್ ಠಾಣೆಗಳಲ್ಲಿಯೂ ಸಹ ಕರ್ತವ್ಯ ನಿರ್ವಹಿಸುತ್ತಿದೆ.

ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಅಗ್ನಿಶಾಮಕ ದಳ ವ್ಯವಸ್ಥೆಗೊಳಿಸುವುದು

787(1123) ಶ್ರೀ ಹ್ಯಾರೀಸ್ ಎನ್ ಎ:(ಶಾಂತಿನಗರ) ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಷ್ಟು ತಾಲ್ಲೂಕುಗಳಿಗೆ ಅಗ್ನಿಶಾಮಕ ಠಾಣೆ ವ್ಯವಸ್ಥೆಯನ್ನು ಒದಗಿಸಿಕೊಟ್ಟಿಲ್ಲ:

ಆ) ಅಗ್ನಿಶಾಮಕ ದಳಗಳ ಸ್ಥಾಪನೆ ಮತ್ತು ಆಧುನೀಕರಣಕ್ಕಾಗಿ ಪ್ರಸಕ್ತ ಸಾಲಿಗೆ ಒದಗಿಸಿದ ಅನುದಾನವೆಷ್ಟು;

ಇ) ತುರ್ತು ಸಂದರ್ಭಗಳಲ್ಲಿ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸುವ ಅಗ್ನಿಶಾಮಕ ಸಿಬ್ಬಂದಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಜರುಗಿಸುವುದೇ?

ಶ್ರೀ ಡಾ ಏ ಎಸ್ ಆಚಾರ್ಯ(ಗೃಹ ಸಚಿವರು)

ಅ) ಸರ್ಕಾರವು ರಾಜ್ಯದ 176 ತಾಲ್ಲೂಕುಗಳ ಪೈಕಿ 41 ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಯನ್ನು ಇನ್ನು ಪ್ರಾರಂಭಿಸಬೇಕಾಗಿದೆ.

ಆ) ಪ್ರಸಕ್ತ 2010-2011ನೇ ಸಾಲಿನಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪನೆ ಹಾಗೂ ಆಧುನೀಕರಣಕ್ಕಾಗಿ ರೂ.31.00 ಕೋಟಿ ಅನುದಾನ ಒದಗಿಸಿದೆ. ಇದಲ್ಲದೇ ಇನ್ನು ಹೆಚ್ಚುವರಿಯಾಗಿ ರೂ.1000ಕೋಟಿ ಅನುದಾನವನ್ನು ನೀಡಲು ತಾತ್ವಿಕ ಒಪ್ಪಿಗೆ ನೀಡಿದೆ. (ಒಟ್ಟು ರೂ.41.00ಕೋಟಿ)

ಇ) ಪ್ರಸ್ತುತ ಅಗ್ನಿಶಾಮಕ ಹಾಗೂ ತುರ್ತು ಸೇವಾ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಇತರ ಸರ್ಕಾರಿ ನೌಕರರುಗಳಿಗೆ ಸಿಗುವ ವೇತನ ಹಾಗೂ ಇತರ ಸೌಲಭ್ಯಗಳ ಜೊತೆ ಈ ಕೆಳತೋರಿಸಿರುವ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಸಾರ್ವತಿಕ ರಜೆ ದಿನಗಳಂದು ಕರ್ತವ್ಯ ನಿರ್ವಹಿಸುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಪ್ರತಿ ವರ್ಷ ಜೂನ್ 1 ರಂದು 30 ದಿನಗಳ ಹೆಚ್ಚಿನ ವೇತನ.

2) ವಾರದ ರಜೆ ಪಡೆಯದೇ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ರೂ.50.00ರಂತೆ ಹೆಚ್ಚುವರಿ ಭತ್ಯೆಯನ್ನು ರೂ.100ಕ್ಕೆ ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

3) ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ 6 ಘಂಟೆಗಿಂತ ಹೆಚ್ಚು ಕರ್ತವ್ಯ ನಿರ್ವಹಿಸಿದಲ್ಲಿ ರೂ.30.00 ರಿಂದ 40.00 ರಷ್ಟು ಆಹಾರ ಭತ್ಯೆ.

4) ಪ್ರತಿ ತಿಂಗಳು ರೂ.50.00 ರಂತೆ ಸಮವಸ್ತ್ರ ಸ್ವಚ್ಚತ ಭತ್ಯೆ.

5) ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ಗಾಯಗೊಂಡರೆ ಅಥವಾ ಪ್ರಾಣ ತೆತ್ತರೆ ರೂ.50,000 ರಿಂದ ರೂ.1.00 ಲಕ್ಷದವರೆಗೆ ಪಾವತಿಸಲು ಸಮೂಹ ವಿಮಾ ಯೋಜನೆ.

6) ಕರ್ತವ್ಯ ನಿರ್ವಹಣೆಯ ಸಂದರ್ಭದಲ್ಲಿ ಗಾಯಗೊಂಡರೆ ಅಥವಾ ಪ್ರಾಣ ತೆತ್ತರೆ ರೂ.2,000 ರಿಂದ 5.00 ಲಕ್ಷದವರೆಗೆ ಎಕ್ಸ್‌ಗ್ರೇಷಿಯ ಪಾವತಿ.

7) ಸಂದರ್ಭನುಸಾರ ಇಲಾಖಾ ಕ್ಷೇಮ ನಿಧಿಯಿಂದ ಚಿಕಿತ್ಸೆ ಮಕ್ಕಳ ವಿದ್ಯಾಭ್ಯಾಸ ಇತ್ಯಾದಿಗಳಿಗೆ ಧನ ಸಹಾಯ.

8) ಬೆಂಗಳೂರು, ಮೈಸೂರು ಹಾಗೂ ಹುಬ್ಬಳ್ಳಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 500 ಸಿಬ್ಬಂದಿಗಳಿಗೆ ಬಸ್‌ಪಾಸ್ ಸೌಲಭ್ಯ.

9) ಇದಲ್ಲದೇ ಸಿಬ್ಬಂದಿಗಳಿಗೆ ಉಚಿತ ಪಡಿತರ ಆಹಾರ ನೀಡುವ ಪ್ರಸ್ತಾವನೆಯು

10) ಸರ್ಕಾರದ ಪರಿಶೀಲನೆಯಲ್ಲಿದೆ.